ಇರುವುದರ ಬಗ್ಗೆ ಬರುತ್ತಿರುವುದು ಒಳಿತಲ್ಲ. ತಾವು ಇದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಿ. ಚರ್ಚೆಗೆ ಅವಕಾಶ ಕೊಡುವಂಥ ಸಮಯದಲ್ಲಿ ನೀವು ಚರ್ಚೆಗೆ ಕೊಡಿ.

ಅಧ್ಯಕ್ಷರು : ಇದು ಜಂಟಿ ಸದನ ಸಮಿತಿಯಾಗಿರುವುದರಿಂದ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರೊಂದಿಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳುತ್ತೇನೆ.

5. ವರದಿ ಒಪ್ಪಿಸುವುದು :

ಶ್ರೀ ಟಿ.ಬಿ. ಜಯಚಂದ್ರ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ) : ಮಾನ್ಯ ಅಧ್ಯಕ್ಷರೆ, 2009–10ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ 2003–04ರ ಸಾಲಿನ ಗೃಹ (ಕಾರಾಗೃಹಗಳು) ಇಲಾಖೆಗೆ ಸಂಬಂಧಿಸಿದ 5ನೇ ವರದಿಯನ್ನು ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಗಳು ಮೊದಲನೆಯದಾಗಿ ಎ.ಎಸ್. ಪಾಟೀಲ್‌ರವರು.

ಶ್ರೀ ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಬೇಕಾದ ಮಾನ್ಯ ಗೋವಿಂದ ಎಂ.ಕಾರಜೋಳರವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಅವರು ಈಗ ಬರುತ್ತಿದ್ದಾರೆ. ಅವರು ಬರುವಷ್ಟರಲ್ಲಿ ಆರ್.ಡಿ.ಪಿ.ಆರ್. ಸಚಿವರ ಗಮನ ಸೆಳೆಯುವ ಸೂಚನೆ ಇದೆ. ತಾವು ಅದನ್ನು ತೆಗೆದುಕೊಳ್ಳಬಹುದು. ಅವರು ಈಗ ಬರುತ್ತಾರೆ.

ಅಧ್ಯಕ್ಷರು : ಪಾಟೀಲ್‌ರೆ, ಸಚಿವರು ಬರುತ್ತಾರೆ. ತಾವು ಆಮೇಲೆ ಕೇಳಿ. ಬಂದ ಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಸಚಿವರು ಬರುತ್ತಿದ್ದಾರೆ. ಅವರು ಬಂದ ನಂತರ ಕೇಳಿ. ಅವರು ಈಗ ಬರುತ್ತಿದ್ದಾರೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : ಮಾನ್ಯ ಅಧ್ಯಕ್ಷರೆ, ಪ್ರತಿ ಸಾರಿ ಇದು ಈ ರೀತಿಯಾಗುತ್ತದೆ.